Kind Attn. Janthi Modi

ಕರ್ನಾಟಕ ಸರ್ಕಾರ

ಕಂದಾಯ ಇಲಾಖೆ

ಸಂಖ್ಯೆ:ಆರ್‌ಡಿ 54 ಡಿಎಸ್‌ಪಿ 2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು,ದಿನಾಂಕ:-27-07-2011.

## ಸುತ್ತೋಲೆ

**ವಿಷಯ:-** ಗ್ರಾಮ ಲೆಕ್ಕಾಧಿಕಾರಿಗಳನ್ನು ವಿವಾಹ ನೋಂದಣಿ ಅಧಿಕಾರಿಗಳನ್ನಾಗಿ ನೇಮಕಾತಿಗೊಳಿಸಿರುವ ಬಗ್ಗೆ.

**ಉಲ್ಲೇಖ:-**1) ಸರ್ಕಾರಿ ಆದೇಶ ಸಂಖ್ಯೆ:- WCD 100 SWW 2006, ದಿನಾಂಕ:- 07.11.2007.

2) ಬಾಲ್ಯ ವಿವಾಹ ತಡೆಗಟ್ಟುವ ಬಗ್ಗೆ ಡಾ|| ಶಿವರಾಜ್ ವಿ. ಪಾಟೀಲ್, ನಿವೃತ್ತ ನ್ಯಾಯದೀಶರ ಸಮಿತಿಯ ವರದಿ.

**||**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು, ಮೇಲೆ ಓದಲಾದ ಉಲ್ಲೇಖ(1) ರನ್ವಯ, ಗ್ರಾಮ ಲೆಕ್ಕಾಧಿಕಾರಿಗಳನ್ನು ಸಂಬಂಧಪಟ್ಟ ಕ್ಷೇತ್ರದ ವ್ಯಾಪ್ತಿಗೆ ವಿವಾಹ ನೋಂದಣಿ ಅಧಿಕಾರಿಗಳನ್ನಾಗಿ ನಿಯುಕ್ತಿಗೊಳಿಸಿ ಆದೇಶ ಹೊರಡಿಸಿದೆ. ಅದರಂತೆ, ಗ್ರಾಮ ಲೆಕ್ಕಾಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಯ ಗ್ರಾಮಗಳಲ್ಲಿ/ವಾರ್ಡ್‌ಗಳಲ್ಲಿ ವಿವಾಹ ಜರುಗಿದ ಸಂದರ್ಭದಲ್ಲಿ ಅಂತಹ ವಿವಾಹಗಳನ್ನು ಕಡ್ಡಾಯವಾಗಿ ನೋಂದಣಿ ಮಾಡತಕ್ಕದ್ದು. ವಿವಾಹ ನೋಂದಣಿ ಧೃಡೀಕರಣ ಪತ್ರವನ್ನು ಅನುಬಂಧ-1 ರಲ್ಲಿ ಲಗತ್ತಿಸಿರುವ ನಮೂನೆಯಂತೆ ಕಡ್ಡಾಯವಾಗಿ ನೀಡತಕ್ಕದ್ದು. ವಿವಾಹ ನೋಂದಣಿಗಳನ್ನು ಮಾಡಲು ನೋಂದಣಿ ರಿಜಿಸ್ಟರ್‌ಗಳನ್ನು ಕಾರ್ಯವ್ಯಾಪ್ತಿಯ ಗ್ರಾಮವಾರು/ವಾರ್ಡ್‌ವಾರು ಅನುಬಂಧ-2 ರಲ್ಲಿ ಲಗತ್ತಿಸಿರುವ ನಮೂನೆಯಂತೆ ನಿರ್ವಹಿಸತಕ್ಕದ್ದು. ದಾಸ್ತಾವೇಜುಗಳನ್ನು ಪ್ರತಿ ತಿಂಗಳು ಸಂಬಂಧ ಪಟ್ಟ ರಾಜಸ್ವ ನೀರಿಕ್ಷಕರು ಮತ್ತು ಸಾಮಾಜಿಕ ಭದ್ರತಾ ಶಿರಸ್ತೆದಾರರು ಕಡ್ಡಾಯವಾಗಿ ಪರಿಶೀಲಿಸತಕ್ಕದ್ದು.

ಜಿಲ್ಲಾಧಿಕಾರಿಗಳು ವಿಷಯದ ಬಗ್ಗೆ ವ್ಯಾಪಕ ಪ್ರಚಾರ ನೀಡಲು ಕ್ರಮ ಕೈ ಗೊಳ್ಳತಕ್ಕದ್ದು.

(ಅಶೋಕ್ ಕುಮಾರ್ ಸಿ.ಮನೋಳಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ.

**ಪ್ರತಿಯನ್ನು:-**

1. ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು.
3. ಆಯುಕ್ತರು, ನೋಂದಣಿ ಮತ್ತು ಮುದ್ರಾಂಕ ಇಲಾಖೆ.
4. ಎಲ್ಲಾ ಪ್ರಾದೇಶಿಕ ಆಯುಕ್ತರು.
5. ಎಲ್ಲಾ ಜಿಲ್ಲಾಧಿಕಾರಿಗಳು.
6. ಎಲ್ಲಾ ಉಪವಿಭಾಗಧಿಕಾರಿಗಳು/ತಹಸೀಲ್ದಾರರುಗಳು/ಉಪತಹಸೀಲ್ದಾರರುಗಳಿಗೆ.
7. ಹೆಚ್ಚುವರಿ ಪ್ರತಿ ಮತ್ತು ರಕ್ಷಾ ಕಡತ.

# ಅನುಬಂಧ-1

## ಕರ್ನಾಟಕ ವಿವಾಹ(ನೋಂದಣಿ ಮತ್ತು ಇತರೇ) ಅಧಿನಿಯಮ, 1976 ಮತ್ತು

ನಿಯಾಮಾವಳಿಗಳು-2006 ರಂತೆ

ನಮೂನೆ-3

(ನಿಯಮ6(2) ರಡಿ)

### ವಿವಾಹ ನೋಂದಣಿ ಪತ್ರ

ಕರ್ನಾಟಕ ವಿವಾಹ ಕಾಯ್ದೆ 1976 ರಡಿಯಲ್ಲಿ ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ

ಶ್ರೀಮತಿ________________________ ತಂದೆ______________________________

ಮತ್ತು ಶ್ರೀ__________________________ ತಂದೆ___________________________

ಇವರುಗಳು ವಿವಾಹ ನಿವೇದನಾ ಪತ್ರದಲ್ಲಿ ನೀಡಿರುವ ಮಾಹಿತಿಯಂತೆ ಇವರುಗಳ ವಿವಾಹವು ದಿನಾಂಕ ___________________ರಂದು ನೆರವೇರಿದ್ದು _____________________ ದಿನಾಂಕದಂದು ನೋಂದಣಿ ಮಾಡಲಾಗಿದೆ.

ಸ್ಥಳ:

ದಿನಾಂಕ: ವಿವಾಹ ನೋಂದಣಾಧಿಕಾರಿಗಳು ಮಾಹರಿನೊಂದಿಗೆ

## ಅನುಬಂಧ-2

## ಗ್ರಾಮ ಲೆಕ್ಕಾಧಿಕಾರಿಗಳು ವಿವಾಹ ನೋಂದಣಿ ಅಧಿಕಾರಿಗಳಾಗಿ ನಿರ್ವಹಿಸಬೇಕಾದ ದಸ್ತಾವೇಜಿನ ನಮೂನೆ

| ಕ್ರಮ ಸಂಖ್ಯೆ | ವಧುವಿನ ಹೆಸರು ಮತ್ತು ವಿಳಾಸ | ವಧುವಿನ ತಂದೆ ಮತ್ತು ತಾಯಿಯ ಹೆಸರು | ವಯಸ್ಸು | ಧರ್ಮ ಜಾತಿ | ವಿದ್ಯಾರ್ಹತೆ | ವರನ ಹೆಸರು ಮತ್ತು ವಿಳಾಸ | ವರನ ತಂದೆ ಮತ್ತು ತಾಯಿಯ ಹೆಸರು | ವಯಸ್ಸು | ಧರ್ಮ ಜಾತಿ | ವಿದ್ಯಾರ್ಹತೆ | ಇತರೇ |
|---|---|---|---|---|---|---|---|---|---|---|---|
| | | | | | | | | | | | |
| | | | | | | | | | | | |
| | | | | | | | | | | | |